**2016ರ ಕರ್ನಾಟಕ ಅಧಿನಿಯಮ ಸಂಖ್ಯೆ: 11**
**ಕರ್ನಾಟಕ ಗಿರವಿದಾರರ (ತಿದ್ದುಪಡಿ) ಅಧಿನಿಯಮ, 2016**
**ಪ್ರಕರಣಗಳ ಪಟ್ಟಿ**

**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. 4ನೇ ಪ್ರಕರಣದ ತಿದ್ದುಪಡಿ
3. 4ಎ ಪ್ರಕರಣದ ತಿದ್ದುಪಡಿ
4. 11ನೇ ಪ್ರಕರಣದ ತಿದ್ದುಪಡಿ
5. 12ನೇ ಪ್ರಕರಣದ ತಿದ್ದುಪಡಿ


**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

**2016ರ ಅಧಿನಿಯಮ ಸಂಖ್ಯೆ 11.–** ಕರ್ನಾಟಕ ಗಿರವಿದಾರರ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 13),–

(i) ಗಿರವಿಗಾಗಿ ಲೈಸೆನ್ಸ್ ನೀಡುವ ವಿಧಾನವನ್ನು ಸರಳಗೊಳಿಸುವುದಕ್ಕೆ ಮತ್ತು ಇಬ್ಬಗೆಯ (dual) ಲೈಸೆನ್ಸನ್ನು ತಪ್ಪಿಸುವುದಕ್ಕೆ;

(ii) ಪ್ರಸ್ತುತ ಹಣಮೌಲ್ಯದ ಪ್ರಕಾರ ಒತ್ತೆಯಿಟ್ಟ ಗಿರವಿ ಅಥವಾ ವಸ್ತುಗಳ ಹರಾಜಿಗಾಗಿ ಕನಿಷ್ಟ ಮೌಲ್ಯವನ್ನು ಪರಿಷ್ಕರಿಸುವುದಕ್ಕೆ;

–ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ 06:, ಕಡತ ಸಂಖ್ಯೆ:ಸಂವ್ಯಶಾಇ 10 ಶಾಸನ 2016)
(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 30ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

## 2016ರ ಕರ್ನಾಟಕ ಅಧಿನಿಯಮ ಸಂಖ್ಯೆ – 11

(2016ರ ಏಪ್ರಿಲ್ ತಿಂಗಳ ಇಪ್ಪತ್ತಾರನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಗಿರವಿದಾರರ (ತಿದ್ದುಪಡಿ) ಅಧಿನಿಯಮ, 2016

(2016ರ ಏಪ್ರಿಲ್ ತಿಂಗಳ ಇಪ್ಪತ್ತೈದನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಗಿರವಿದಾರರ ಅಧಿನಿಯಮ, 1961ನ್ನು ಮತ್ತುಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಗಿರವಿದಾರರ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 13) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**–(1) ಈ ಅಧಿನಿಯಮವನ್ನು ಕರ್ನಾಟಕ ಗಿರವಿದಾರರ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 4ನೇ ಪ್ರಕರಣದ ತಿದ್ದುಪಡಿ.**– ಕರ್ನಾಟಕ ಗಿರವಿದಾರರ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 13) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 4ನೇ ಪ್ರಕರಣದಲ್ಲಿ,–

(i) (2)ನೇ ಉಪಪ್ರಕರಣದಲ್ಲಿನ (ಸಿ) ಖಂಡವನ್ನು ಬಿಟ್ಟುಬಿಡತಕ್ಕದ್ದು.

(ii) (5)ನೇ ಉಪಪ್ರಕರಣದಲ್ಲಿ,–

(ಎ) (ಎ) ಖಂಡದಲ್ಲಿ "ಎರಡು ಸಾವಿರದ ಐದು ನೂರು ರೂಪಾಯಿಗಳು" ಎಂಬ ಪದಗಳಿಗೆ "ಐದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (ಬಿ) ಖಂಡದಲ್ಲಿ "ಎರಡು ಸಾವಿರದ ಐದುನೂರು ರೂಪಾಯಿಗಳು" ಮತ್ತು "ಒಂದು ಸಾವಿರದ ಎರಡುನೂರ ಐವತ್ತು ರೂಪಾಯಿಗಳು" ಎಂಬ ಪದಗಳಿಗೆ "ಐದು ಸಾವಿರ ರೂಪಾಯಿಗಳು" ಮತ್ತು "ಎರಡು ಸಾವಿರದ ಐದುನೂರು ರೂಪಾಯಿಗಳು" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

(ಸಿ) ಪರಂತುಕದಲ್ಲಿ "ಮೇಲೆ ನಿರ್ದಿಷ್ಟಪಡಿಸಿದ ದರಗಳ ಎರಡು ಪಟ್ಟು ಫೀಜನ್ನು ಸೇರಿಸತಕ್ಕದ್ದು" ಎಂಬ ಪದಗಳಿಗೆ "ಮೇಲೆ ನಿರ್ದಿಷ್ಟಪಡಿಸಿದ ದರದ ಶೇಕಡಾ ಐವತ್ತರಷ್ಟು ಹೆಚ್ಚುವರಿ ಲೈಸೆನ್ಸ್ ಶುಲ್ಕವನ್ನು ಸೇರಿಸತಕ್ಕದ್ದು. ಆದಾಗ್ಯೂ, ಲೈಸನ್ಸಿನ ಅವಧಿ ಮುಕ್ತಾಯವಾದ ನಂತರ ತರುವಾಯ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸತಕ್ಕದ್ದಲ್ಲ." ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 4ಎ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 4ಎ ಪ್ರಕರಣದಲ್ಲಿನ ಮೊದಲನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**4. 11ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 11ನೇ ಪ್ರಕರಣದ (2) ಮತ್ತು (3)ನೇ ಉಪಪ್ರಕರಣಗಳಲ್ಲಿ "ಹತ್ತು ರೂಪಾಯಿಗಳನ್ನು" ಎಂಬ ಪದಗಳಿಗೆ "ಎರಡು ಸಾವಿರ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. 12ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 12ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಹತ್ತು ರೂಪಾಯಿಗಳನ್ನು" ಎಂಬ ಪದಗಳಿಗೆ "ಎರಡು ಸಾವಿರ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಕೆ.ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳ ಇಲಾಖೆ